ಪದಬಂಧ




ಎಡದಿಂದ ಬಲಕ್ಕೆ:

1. ಅಮ್ಮನ ಸಮಾನ–ಎಲ್ಲೆಲ್ಲೂ ಕಾಣುವಂತಹದಲ್ಲ ಬಿಡಿ (4)
3. ಪಾರಂಗತನಾಗುವ ಹಾದಿಯಲ್ಲಿ ಭಾರೀ ಮುನ್ನಡೆ (3)
7. ಬಲಗೈಯಲ್ಲೇ ಕಾಣಬಹುದು ನಾಲ್ಕರ ಒಂದಂಶ (4)
8. ಶೂರರಿಗೆ ತಕ್ಕದ್ದು ನೆಲದಲ್ಲಿ ಕೊರೆದ ಹಾದಿ (3)
9. ವಿರಸವೇ ಆಕೆಗೆ ಮಧುರ (2)
12. ಕಾಸು ತಿರುವಿ ಹಾಕಿ ಹಿತ ಪಡೆಯಬಹುದೇ? (2)
14. ಹೆದರಿಕೆ ಏಕೆ? ಆ ಮಾತು ಹೃದಯ ಪೂರ್ವಕ (3)
15. ಹಳತಿನ ಮೌಲ್ಯಗಳು ಅರಿವಾಗುವಂತೆ ತಿಳಿಸು (4)
17. ಬಂಡವಾಳಕ್ಕೆ ಕಾದಿದ್ದಾನೆ– ಹಣವಂತನಲ್ಲ (3)
18. ಗಾಬರಿಯಾಗುವುದಿಲ್ಲವೇ? ಮಳೆ ಕೊರತೆಯ ಸಮಯ (4)

ಮೇಲಿಂದ ಕೆಳಕ್ಕೆ:

1. ಅತ್ತಿಂದಿತ್ತ ತಂದದ್ದು ವಿಪರೀತವೇ ಆಯಿತು (2)
2. ಮಸಾಲೆ ವಸ್ತು ಸರಿ. ಬಣ್ಣ ಮಾತ್ರ ಮಂಕು (3)
4. ಸರಾಗವಾಗಿ ಕತ್ತರಿಸಲು ಸೂಕ್ತ ಸಾಧನ (4)
5. ಅಗಸೇ ಮರದ ತುತ್ತ ತುದಿ ಎಲ್ಲಿದೆ ನೋಡಿದಿರಾ? (3)
6. 'ಆಕಳ ಕರು'ವಿನಂತಹದೇ ಎಳೇ ಮಗು (4)
10. ಕೈವಶವಾದ ವಸ್ತು ಪ್ರಾಣಹಾರಕ (4)
11. ಮಹಡಿಗೆ ಹತ್ತುವುದೆಂದರೆ ಭಾರೀ ವಿಪತ್ತು (4)
13. ಕತ್ತಿ ತರಿಸು. ಕೋಪ ಬರಿಸು (3)
16. ಕತ್ತೆ–ಕುದುರೆ ಸಂಕರ–ಏನು ಹೆಸರು? (3)
17. ಬಾಲ ಕತ್ತರಿಸಿದರೂ ಶಕ್ತಿ ಉಳಿದೇ ಇದೆ (2)

### 14–8–14ರ ಉತ್ತರಗಳು

ಎಡದಿಂದ ಬಲಕ್ಕೆ:

1. ಪ್ರಸಾಧನ; 3. ಆಲೇಖ; 4. ವ್ಯಸನ; 6. ರಮ್ಯಗೀತೆ; 7. ಪರಧನ; 8. ಪಾಕಶಾಲೆ; 10. ಸಚ್ಚರಿತ; 12. ಬಾಯಾರಿಕೆ; 14. ಜಯಾಜಯ; 16. ಭವನ; 17. ಮರುಕ; 18. ಕಳವಳ.

ಮೇಲಿಂದ ಕೆಳಕ್ಕೆ:

1. ಪ್ರಖರ; 2. ನವ್ಯತೆ; 3. ಆರಾಧಕ; 5. ನಡುಕ; 7. ಪರಿಹಾಸ; 9. ಲೆಕ್ಕಣಿಕೆ; 11. ರಿಷಭ; 13 ಭಯಾನಕ; 14. ಜನಕ; 15. ಯಮಳ.

## ಪ್ರಶ್ನಾಂಕಣ

# ಚಂದ್ರನ ನೆಲದಲ್ಲಿ ಏನೇನು ದಾಖಲೆ?

ಚಂದ್ರನ ನೆಲದ ದಾಖಲೆಗಳು ಒಂದಲ್ಲ, ಎರಡಲ್ಲ. ಚಂದ್ರನ ನೆಲದ ಮೇಲ್ಮೈ ಲಕ್ಷಣಗಳ ಅಲ್ಲಿನ ಸ್ಥಿತಿ–ಪರಿಸ್ಥಿತಿಗಳ ಮಹದಚ್ಚರಿಯ ದಾಖಲೆಗಳೇ ಹಲವಾರು. ಇಸವಿ 2009 ರಿಂದ ನ್ಯಾಸಾದ ಚಂದ್ರನೌಕೆ 'ಲೂನಾರ್ ರಿಕಾನೆಸೆನ್ಸ್ ಆರ್ಬಿಟರ್' ನಡೆಸಿದ ಚಾಂದ್ರ ನೆಲ ಸರ್ವೇಕ್ಷಣಾ ಮಾಹಿತಿಗಳಿಂದ ಆಯ್ದ ಅಂಥ ಕೆಲ ಸೋಜಿಗದ ಅಂಶಗಳು:

* ಚಂದ್ರನ ನೆಲದಲ್ಲಿ ಹಳ್ಳ ಕೊಳ್ಳ ಕುಳಿಗಳು ವಿಪರೀತ (ಚಿತ್ರ 2 ರಲ್ಲಿ ಗಮನಿಸಿ). ಈಗ್ಗೆ ಸುಮಾರು 380 ಕೋಟಿ ವರ್ಷ ಹಿಂದೆ ಚಂದ್ರನ ಮೇಲೆ ಮಳೆಯಂತೆ ಸುರಿದು, ನೆಲಕ್ಕೆ ಅಪ್ಪಳಿಸಿದ ಕ್ಷುದ್ರಗ್ರಹಗಳ ಮಹಾಮಳೆಗಳ ಫಲಿತ ಈ ಲಕ್ಷಣ. ಈ ಕುಳಿಗಳು ಎಷ್ಟು ವಿಶಾಲವೆಂದರೆ ಒಟ್ಟು 5185 ಕುಳಿಗಳ ವ್ಯಾಸ 20 ಕಿ.ಮೀ.ಗಿಂತ ಅಧಿಕವಿದ್ದು ಆ ಪೈಕಿ ಹತ್ತಾರು ಕುಳಿಗಳು ನೂರಾರು ಕಿ.ಮೀ. ಅಗಲ ಇವೆ. 'ಚಂದ್ರ ಸಾಗರ'ಗಳೆಂದೇ ಅವು ಪ್ರಸಿದ್ಧ. ಚಂದ್ರನಲ್ಲಿ ಬೀಸುವ ಗಾಳಿ, ಹರಿವ ನೀರು ಇತ್ಯಾದಿ ಶಿಥಿಲಕಾರಕಗಳು ಇಲ್ಲದ್ದರಿಂದ ಚಾಂದ್ರ ನೆಲದ ಸಕಲ ಗುರುತು–ಲಕ್ಷಣಗಳೂ ಅಲ್ಲಿ ಶಾಶ್ವತ (ಚಿತ್ರ–1).

* ಚಂದ್ರನ ಉತ್ತರ ಮತ್ತು ದಕ್ಷಿಣ ಧ್ರುವ ಪ್ರದೇಶಗಳಲ್ಲಿನ ಹಳ್ಳ–ಕುಳಿಗಳಲ್ಲಿ 'ಘನ ರೂಪದ ನೀರು' ಸಂಗ್ರಹವಾಗಿದೆ. ಚಂದ್ರನ ಈ ಪ್ರದೇಶಗಳದು ಇಡೀ ಸೌರವ್ಯೂಹದಲ್ಲೇ ಗರಿಷ್ಠ ಶೀತದ ದಾಖಲೆ.

* ಚಂದ್ರನ ನೆಲದ ಅತ್ಯಂತ ಆಳದ ಸ್ಥಳ (ಚಿತ್ರ–2 ರಲ್ಲಿ ಬಾಣ ಎಲ್ ಸೂಚಿಸುತ್ತಿರುವ ಸ್ಥಳ) ಸರಾಸರಿ ನೆಲ ಮಟ್ಟದಿಂದ 29,954 ಅಡಿ ಕೆಳಗಿದೆ. (ಭೂ ನೆಲದ ಅತ್ಯಂತ ಆಳದ 'ಚಾಲೆಂಜರ್ ಡೀಪ್' ಸಾಗರಮಟ್ಟದಿಂದ 35,994 ಅಡಿ ಆಳದಲ್ಲಿದೆ).




* ಔನ್ನತ್ಯದಲ್ಲಿ ಭೂ ದಾಖಲೆಯನ್ನು ಮೀರಿಸಿರುವುದು ಚಾಂದ್ರ ನೆಲ ಲಕ್ಷಣದ ಅದ್ಭುತ ಸೋಜಿಗ. ಚಂದ್ರನ ನೆಲದ ಅತ್ಯಂತ ಎತ್ತರದ ನೆಲೆ (ಬಾಣ ಎಚ್ ನೋಡಿ) ಅಲ್ಲಿನ ಸರಾಸರಿ ನೆಲಮಟ್ಟದಿಂದ 35,400 ಅಡಿ ಔನ್ನತ್ಯ ಮುಟ್ಟಿದೆ ಎಂದರೆ ಧರೆಯ ಅತ್ಯುನ್ನತ ಶಿಖರ 'ಗೌರೀ ಶಂಕರ'ಕ್ಕಿಂತ 6365 ಅಡಿ ಹೆಚ್ಚು ಎತ್ತರ! ವಿಶೇಷ ಏನೆಂದರೆ ಅತಿ ಆಳದ ಮತ್ತು ಎತ್ತರದ ಇವೆರಡೂ ದಾಖಲೆಯ ನೆಲೆಗಳೂ ಚಂದ್ರನ ಹಿಂಬದಿಯಲ್ಲೇ– ಎಂದರೆ ಭೂಮಿಯಿಂದ ಗೋಚರಿಸದ ಪಾರ್ಶ್ವದಲ್ಲೇ– ಇವೆ.

* ಮಾನವರು ನೇರ ಸ್ಪರ್ಶಿಸಿರುವ ಏಕೈಕ ಭೂಮ್ಯೇತರ ಕಾಯದ ನೆಲ ಆಗಿರುವುದೂ ಚಾಂದ್ರ ನೆಲದ ಮತ್ತೊಂದು ಅನನ್ಯ ದಾಖಲೆ.

■ ಎನ್. ವಾಸುದೇವ್